ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಅನೇಕ ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ. ಜಿಲ್ಲಾ ಮಟ್ಟದ ಸಮಿತಿ ಮಾಡತಕ್ಕ ಕೆಲಸಗಳನ್ನು ರಾಜ್ಯಮಟ್ಟಕ್ಕೆ ತೆಗೆದುಕೊಂಡಿದ್ದರಿಂದ ಅವರು ಮಾಡಿದ ನೇಮಕಾತಿಯನ್ನು ಇದು ರದ್ದು ಮಾಡಿದ್ದಾರೆ ಎಂದು ಹೇಳುತ್ತೇನೆ. ರಾಜ್ಯಮಟ್ಟಕ್ಕೆ ತೆಗೆದುಕೊಳ್ಳುವುದಕ್ಕೆ ಮೊದಲೇ ನೇಮಕ ಮಾಡಿದಂತಹ ಸಮಿತಿ ಪಟ್ಟಿ ಮಾಡಿದ್ದರೆ ಅವನ್ನು ಅಂಗೀಕರಿಸುತ್ತೀರಾ ?

2.00 P. M.

ಶ್ರೀ ಎ. ಆರ್. ಬದರಿನಾರಯಣ.—ರಾಜ್ಯ ಮಟ್ಟದ ಸಮಿತಿಯನ್ನು ನೇಮಕ ಮಾಡಿದ್ದರಿಂದ ಜಿಲ್ಲಾ ಮಟ್ಟದ ಸಮಿತಿ ಮಾಡಿದ ಸೆಲೆಕ್ಷನ್ ರದ್ದು ಆಯಿತು, ಅದು ರದ್ದಾದ್ದರಿಂದ ಅದು ಹೊರಟು ಹೋಯಿತು.

ಶ್ರೀ ಎಂ. ವಿ. ಗಾಡಿ.—ಜಿಲ್ಲಾ ಮಟ್ಟದ ನೇಮಕವನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಅದು ಸರಿಯಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳ ವೇಳೆ ಇಲ್ಲಿಗೆ ಮುಗಿಯಿತು.

CALLING ATTENTION TO A MATTER OF URGENT PUBLIC IMPORTANCE.

[*re* : *Trading in Foodgrains*]

Sri T. R. SHAMANNA (Fort).—I beg to call the attention of the Minister of State for Food and Civil Supplies to the Government's policy regarding trading in foodgrains.

ಶ್ರೀಮತಿ ಇ. ಇ. ಪಾಜ್ (ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ರಾಜ್ಯ ಮಂತ್ರಿಗಳು).—ಪಾಡಿಕೆಯಂತೆ, ಸರ್ಕಾರದವರು ಸೆಪ್ಟೆಂಬರ್ 1972ರಲ್ಲಿ 72—73ನೆಯ ಫಸಲು ವರ್ಷದ ಬಗ್ಗೆ ತಮ್ಮ ಆಹಾರನೀತಿಯನ್ನು ಪ್ರಕಟಿಸಿದರು. ಈ ನೀತಿಯ ಪ್ರಕಾರ ರಾಜ್ಯದೊಳಗೆ ಬೆಳೆದ ಬತ್ತ ಮತ್ತು ಜೋಳವನ್ನು ಈಗಿನ ಲೆವಿ ಅದೇಶಗಳ ಮೇರೆಗೆ ಮುಂದೆಯೂ ಸಂಗ್ರಹಿಸಿಕೊಳ್ಳಲಾಗುವುದು. ಸಂಗ್ರಹಣದ ಗುರಿ ಕ್ರಮವಾಗಿ 1,25,000 ಟನ್ ಮತ್ತು 75,000 ಟನ್ ವಸೂಲಿ ಬೆಲೆ, ಲೆವಿ ಪ್ರಮಾಣ, ಮಾಫಿ ಮತ್ತು ವಿನಾಯಿತಿ ಪರಿಮಿತಿಗಳು ಮತ್ತು ಸಂಗ್ರಹಣ ಕ್ರಮ—ಇದೆಲ್ಲ ಹಿಂದಿನ ವರ್ಷದ್ದಕ್ಕಿಂತೆಯೇ ಇರುತ್ತದೆ. ಬತ್ತ, ಜೊಳ ಇವೆರಡನ್ನು, ಭಾರತದ ಫುಡ್ ಕಾರ್ಪೊರೇಷನ್ ಸಂಸ್ಥೆಯು ಸಂಗ್ರಹಿಸುವುದು. ಸಾರ್ವಜನಿಕ ಹಂಚಿಕೆಯ ವ್ಯವಸ್ಥೆಯು ವಿಚಾರದಲ್ಲಿ ಈಗಿನ ವಿಧಾನವೇ ಮುಂದುವರಿಯುವುದು. ಹಾಗಿದ್ದರೂ, ವಿಶೇಷವಾಗಿ ಒಳನಾಡಿನ ಪ್ರದೇಶಗಳಲ್ಲಿ ಅವಶ್ಯವೆಂದು ಕಂಡುಬಂದರೆ ನ್ಯಾಯ ಬೆಲೆಯ ಅಂಗಡಿಗಳನ್ನು ನಿರಾತಂಕವಾಗಿ ತೆರೆಯಲು ಡಿಪ್ಯುಟಿ ಕಮಿಷನರುಗಳು ಕ್ರಮ ಕೈಕೊಳ್ಳುವರು.

ಅಕ್ಟೋಬರ್ 1972ರಲ್ಲಿ ನಡೆದ ಏ. ಐ. ಸಿ. ಸಿ. ಸಭೆಯಲ್ಲಿ ಕೈಕೊಂಡ ನಿರ್ಣಯವನ್ನು ಗಮನಕ್ಕೆ ತೆಗೆದುಕೊಂಡು, ರಾಜ್ಯಸರ್ಕಾರದವರು ಬತ್ತದ, ಅಕ್ಕಿಯ ಸಗಟು ವ್ಯಾಪಾರವನ್ನು ವಹಿಸಿಕೊಳ್ಳಬೇಕೆಂದು ನಿರ್ಧರಿಸಿ, ಈ ಉದ್ದೇಶಕ್ಕಾಗಿ ವಿವರವಾದ ಯೋಜನೆಯೊಂದನ್ನು ಭಾರತ ಸರ್ಕಾರದ ಅನುಮೋದನೆಗೆ ಕಳುಹಿಸಲಾಯಿತು. ರಾಜ್ಯಸರ್ಕಾರದವರು ಸೂಚಿಸಿದ ಬತ್ತದ ಖರೀದಿ ಬೆಲೆ ತಾವು ಗೊತ್ತುಪಡಿಸಿದ ಬೆಲೆಗಿಂತ ಬಹಳ ಹೆಚ್ಚೆಂದು ಭಾವಿಸಿದ್ದುದರಿಂದ ಈ ಯೋಜನೆಯನ್ನು ಭಾರತ ಸರ್ಕಾರದವರು ಒಪ್ಪುವ ಸೂಚನೆ ಕಂಡುಬಂದಿರಲಿಲ್ಲ. ಈ ವಿಷಯವನ್ನು ಪರಿಶೀಲಿಸಿ ಅದಕ್ಕಿಂತ ಹಿಂದೆ ನಿರ್ಧರಿಸಿದ್ದ, ಎಂದರೆ ಸೆಪ್ಟೆಂಬರ್ ತಿಂಗಳಲ್ಲಿ ನಿರ್ಧರಿಸಿದ್ದ, ಆಹಾರ ನೀತಿಯನ್ನೇ ಮುಂದುವರಿಸಿ ಕೊಂಡು ಬರುವುದಾಗಿ ನಿರ್ಧರಿಸಲಾಯಿತು. ಆದರೆ, ಈ ನೀತಿಯಲ್ಲಿ ಮುಂದೆ ಹೇಳುವ ಬದಲಾವಣೆಗಳಿರುತ್ತವೆ :—

1. ಬತ್ತ ಸಂಗ್ರಹದ ಗುರಿಯನ್ನು 1,50,000 ಟನ್ನಿಗೆ ಹೆಚ್ಚಿಸಬೇಕು.

(ಶ್ರೀಮತಿ ಇ. ಇ. ವಾಜ್)

2. ನಂಗ್ರಹಿಸಿ, ದಾಸ್ತಾನು ಸ್ಥಳಕ್ಕೆ ಒಪ್ಪಿಸಿಕೊಟ್ಟ ಭತ್ಯ ಕ್ವಿಂಟಾಲ್ ಒಂದಕ್ಕೆ ಈಗಿನಂತೆ 50 ಪೈಸೆಯ ಬದಲಾಗಿ ಕ್ವಿಂಟಾಲಿಗೆ 2.50 ರೂಪಾಯಿಯಂತೆ ಬೆಳೆ ಗಾರರಿಗೆ ಗಾಡಿಬಾಡಿಗೆ ಕೊಡಲಾಗುವುದು.

3. ದಪ್ಪಕ್ಕಿಯ ಚಿಲ್ಲರೆ ಮಾರಾಟ ಬೆಲೆಯನ್ನು ಕ್ವಿಂಟಾಲ್ ಒಂದಕ್ಕೆ 103 ರೂ. ಯಿಂದ 100 ರೂ. ಗೆ ಇಳಿಸಲಾಗುವುದು. ಇದರಲ್ಲಿ ಮಾರಾಟ ತೆರಿಗೆ ಮತ್ತು ಸರ್ಚಾರ್ಜು ಸೇರುವುದಿಲ್ಲ.

4. ಸಣ್ಣಕ್ಕಿ, ಸಾದಾ ಸಣ್ಣಕ್ಕಿ, ಸಾದಾ ಅಕ್ಕಿಯ ಮಾರಾಟ ಬೆಲೆಗಳನ್ನು, ಮಾರಾಟ ತೆರಿಗೆ ಮತ್ತು ಸರ್ಚಾರ್ಜು ಹೊರತು, ಕ್ರಮವಾಗಿ ಕ್ವಿಂಟಾಲಿಗೆ 130 ರೂ., ಕ್ವಿಂಟಾಲಿಗೆ 120 ರೂ. ಮತ್ತು ಕ್ವಿಂಟಾಲಿಗೆ 110 ರೂ. ಎಂದು ಗೊತ್ತುಪಡಿಸಲಾಗುವುದು.

ಈ ಫಸಲು ವರ್ಷದ ಸಂಗ್ರಹ ನೀತಿಯನ್ನು ಹಿಂದಿನ ವರ್ಷದಂತೆ ಮುಂದುವರಿಸಿಕೊಂಡು ಬಂದಿರುವ ಕಾರಣ, ಕಾರ್ಯನೀತಿಯಲ್ಲಿ ಹಠಾತ್ತನೆ ಉಂಟಾಗುವ ಬದಲಾವಣೆಯಿಂದಾಗಿ ಕಷ್ಟ ಉಂಟಾಗುತ್ತದೆಂಬ ಭಯಕ್ಕೆ ಅವಕಾಶವಿಲ್ಲ. ಬಳಕೆದಾರರ ಹಿತಾರ್ಥವಾಗಿ, ಈಗಿನ ಸಾರ್ವಜನಿಕ ಪಂಚಿತೆ ಪದ್ಧತಿಯನ್ನು ಸರ್ಕಾರದವರು ವಿಸ್ತರಿಸಿ ಏಕರೂಪಕ್ಕೆ ತರಬಯಸುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.— ಈ ವರ್ಷ ರಾಜ್ಯದ ಅನೇಕ ಭಾಗಗಳಲ್ಲಿ ಬೆಳೆ ಕಟ್ಟು ಹೋಗಿರುವುದರಿಂದ ತಾವು ಪ್ರೊಕ್ಯೂರ್ ಮಾಡತಕ್ಕದ್ದನ್ನು ಒಂದು ಲಕ್ಷ 25 ಸಾವಿರ ಟನ್‌ನಿಂದ ಒಂದು ಲಕ್ಷ 50 ಸಾವಿರಕ್ಕೆ ಹೆಚ್ಚಿಸಿರುವುದು ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ, ಹಾಗೆಯೇ ಜವಾರ್ ಬೆಳೆ ಕಟ್ಟು ಹೋಗಿರುವುದರಿಂದ 75 ಸಾವಿರ ಟನ್ ಅನ್ನು ವಸೂಲು ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ತಿಳಿಸುತ್ತೀರಾ ?

ಎರಡನೆಯದಾಗಿ, ಫೈನ್ ಮತ್ತು ಮೀಡಿಯಂ ಅಕ್ಕಿಯ ಬೆಲೆ ಹೆಚ್ಚಿರುವುದರಿಂದ ಕ್ಯಾಲಟಿ ಏನಾದರೂ ಇಂಪ್ರೂವ್ ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ? ಈ ಬಗ್ಗೆ ವಿವರಣೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಇ. ಇ. ವಾಜ್.— ಮಾನ್ಯ ಸದಸ್ಯರು ಕೆಲವು ಕಡೆ ಬೆಳೆ ಕಡಿಮೆಯಾಗಿದೆ, ಕೆಲವು ಕಡೆ ಕಟ್ಟು ಹೋಗಿದೆ ಎಂದು ಹೇಳುತ್ತಿದ್ದಾರೆ. ಪ್ರತಿಯೊಂದು ಪರಿಯಾದಲ್ಲಿ ನಮ್ಮ ಅಧಿಕಾರಿಗಳು ಹೋಗಿ ಅಷ್ಟವಾರು ಎಷ್ಟು ಬೆಳೆಯಾಗಿದೆ ಎನ್ನುವುದನ್ನು ಪರಿಶೀಲಿಸಿ ಎಷ್ಟರಮಟ್ಟಿಗೆ ಲೆವಿಹಾಕಲಿಕ್ಕೆ ಆಗುತ್ತದೆ ಅಷ್ಟು ಹಾಕಬಹುದು ಎಂದು ಎಲ್ಲಾ ಪ್ರಯತ್ನ ಮಾಡಿ ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದು ಏನೆಂದರೆ, ಕೊಡುವ ಕಡೆಯಲ್ಲಿ ಕೊಡುವವರು ಇದ್ದಾರೆ ಅವರಿಗೆ ಕೊಡಿ ಎಂದು ಪ್ರೋತ್ಸಾಹ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಆದಷ್ಟು ಬೇಗ ಒಳ್ಳೆಯ ಕ್ವಾಲಿಟಿ ಅಕ್ಕಿಯನ್ನು ಕೊಡುವ ಹಾಗೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೇಂದ್ರ ಸರ್ಕಾರವನ್ನು ಒಲಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರಕ್ಕೆ ಆಗದೇ ಹೋಗಿ, ತೆಗೆದುಕೊಂಡಂಥ ತೀರ್ಮಾನವಿಂದ ವಾಪಸ್ ಹೋಗುತ್ತಿದ್ದಾರೆ. ಅವ್ವರಿಂದ ರೈತರು ತಾವು ಬೆಳೆದಂಥ ಬತ್ತವನ್ನು ಕಡಿಮೆ ದರಕ್ಕೆ ಕೊಡುವ ಪರಿಸ್ಥಿತಿ ಬಂದು ಬಿಟ್ಟಿದೆ. ಸರ್ಕಾರದವರು ತಮ್ಮ ನಿಲುವನ್ನು ಭದ್ರ ಮಾಡಿಕೊಂಡು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ, ಹಿಂದೆ ಮಾಡಿದಂತೆ ಏತಕ್ಕೆ ತೀರ್ಮಾನ ಮಾಡಬಾರದು ಎಂದು ಕೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. ಆಹಾರ ಧಾನ್ಯದ ಸಗಟು ವ್ಯಾಪಾರವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಏನು ಯೋಜನೆ ಕಳುಹಿಸಿದ್ದೀರಿ. ಆ ಯೋಜನೆಯಲ್ಲಿ ಬತ್ತ ಸಂಗ್ರಹಣೆಗೆ ಹಣ ಜಾಸ್ತಿ ಕೊಡಬೇಕು ಎಂದು ಹೇಳಿದ್ದಾರೆ. ಅದನ್ನು ಕೇಂದ್ರದವರು ಒಪ್ಪಿಕೊಳ್ಳಲಿಲ್ಲ. ಅದ್ದರಿಂದ ಇದನ್ನು ಕೈಬಿಟ್ಟಿದ್ದೇವೆ ಎನ್ನುವ ಅರ್ಥದಲ್ಲಿ ಆಹಾರ ಮಂತ್ರಿಗಳು ಮಾತನಾಡಿದ್ದಾರೆ. ಈಗ ಬೆಲೆಯನ್ನು ಏನು ನಿಶ್ಚರ್ಷೆ ಮಾಡಿದ್ದಾರೆ, ಅದನ್ನು ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ಮೂಲಭೂತವಾಗಿ ಆಹಾರ ಧಾನ್ಯದ ಸಗಟು ವ್ಯಾಪಾರ ಮಾಡುವ ತತ್ವದ ಪ್ರಶ್ನೆಯನ್ನು ಬಿಟ್ಟು ಬಿಟ್ಟಿರುವುದು ಸರಿ. ಈ ತತ್ವವನ್ನು ಕಾಂಗ್ರೆಸ್ ಒಪ್ಪಿದ ಮೇಲೆ ಆ ತತ್ವವನ್ನು ಹೇಗೆ ಕೈ ಬಿಟ್ಟು ಕೊಡುತ್ತೀರಿ! ನೀವು ಏನು ಏನು ಹೇಳಿದ್ದೀರಿ ಅದನ್ನು ಮುಂದೆ ಕಾರ್ಯ ರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆಯೇ! ಎನ್ನುವ ಅನುಮಾನ ಬರುತ್ತದೆ. ಬೆಲೆಗಳು ಜಾಸ್ತಿಯಾಗುವುದಿಲ್ಲವೇ!

ಶ್ರೀ ಎಚ್. ಡಿ. ದೇವೆಗೌಡ.—ಕೇಂದ್ರ ಸರ್ಕಾರದ ಮನ ಒಲಿಸಿಕೊಳ್ಳುವುದಕ್ಕೆ ನಾಲ್ಕು ಜನ ಮಂತ್ರಿಗಳ ನವಾರಿ ದೆಹಲಿಗೆ ಹೋಗಿತ್ತು. ಏಷಿಯಾಡ್—72 ನೋಡುವುದಕ್ಕೆ ಹೋಗಿತ್ತೋ ಅಥವಾ ಇದಕ್ಕೋಸ್ಕರ ಹೋಗಿದ್ದರೋ, ಅದರ ಪ್ರತಿಫಲ ಏನು ಆಯಿತು? ತಾವು ಕೇಂದ್ರ ಸರ್ಕಾರದ ಮನ ಒಲಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಯೇ ಎನ್ನುವುದನ್ನು ದಯವಾಡಿ ಈ ಸಭೆಗೆ ತಿಳಿಸುತ್ತೀರಾ?

† ಶ್ರೀ ಎಂ. ಪ್ಯೆ. ಘೋರ್ಪಡೆ (ಹಣಕಾಸು ಮಂತ್ರಿಗಳು).—ನಮಗೆ ಗೊತ್ತಿರುವಂತೆ ಲೆವಿ ಸಿಸ್ಟಮ್ ನಮ್ಮ ರಾಜ್ಯದಲ್ಲಿಲ್ಲ. ಲೆವಿ ಸಿಸ್ಟಮ್ ಪ್ರಕಾರ ಎಕರೇಜ್ ಬೇಸಿಸ್ ಮೇಲೆ ಇಷ್ಟಿಷ್ಟು ಪ್ರೊಕ್ಯೂರ್ ಮಾಡಬೇಕು ಎನ್ನುವುದನ್ನು ನಿಗಧಿ ಮಾಡಿದಂತೆ ಲೆವಿಯನ್ನು ಸರ್ಕಾರದವರು ತೆಗೆದುಕೊಳ್ಳುತ್ತಿದ್ದಾರೆ ಅದರ ಪ್ರಕಾರ ಒಂದು ಲಕ್ಷ 25 ಸಾವಿರ ಟನ್ ಬತ್ತವನ್ನು ವಸೂಲು ಮಾಡುವ ಟಾರ್ಗೆಟ್ ಇದೆ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಧಾನ್ಯಗಳ ಸಂಗ್ರಹಣೆ ಮಾಡಿದರೆ, ಹೆಚ್ಚು ಪ್ರಮಾಣದಲ್ಲಿ ರೇಷನಿಂಗ್ ಸಿಸ್ಟಂ ಅನ್ನು ಜಾಸ್ತಿ ಮಾಡಲಿಕ್ಕೆ ಸಾಧ್ಯ ಕಾಳು ಕಡಿಮೆ ಇದ್ದರೆ, ರೇಷನಿಂಗ್ ಮಾಡುವುದಕ್ಕಾಗುವುದಿಲ್ಲ. ಅದಕಾರಣ, ಒಂದು ಲಕ್ಷ 25 ಸಾವಿರ ಏನು ಪ್ರಕ್ಯೂರ್‌ಮೆಂಟ್ ಮೂಲಕ ಸಂಗ್ರಹಣೆ ಆಗುತ್ತಿತ್ತೋ ಅದಕ್ಕಿಂತ ಸ್ವಲ್ಪ ಪ್ರಮಾಣವನ್ನು ಜಾಸ್ತಿ ಮಾಡಿ ಎರಡು ಲಕ್ಷ ಐವತ್ತು ಸಾವಿರ ಟನ್ ಅಕ್ಕಿಗೆ, 4 ಲಕ್ಷ ಟನ್ ಪ್ಯಾಡಿಯನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ವಿಚಾರ ಮಾಡಿದರೆ, ರೈತರು ಸ್ವಲ್ಪಮಟ್ಟಿಗೆ ಜಾಸ್ತಿ ಬತ್ತ ಕೊಡಬೇಕಾಗುತ್ತದೆ. ಈ ವಿಚಾರವನ್ನು ಕೇಂದ್ರ ಸರ್ಕಾರದ ಮುಂದೆ, ಸರ್ಕಾರವು ಪತಿಯಿಂದ ಇಟ್ಟಿದ್ದು ನಿಜ. ನಿಮಗೆಲ್ಲಾ ಗೊತ್ತಿರುವಂತೆ, ಗೋಧಿಗೆ, ಪ್ರಕ್ಯೂರ್‌ಮೆಂಟ್ ಪ್ರೈಸ್ ಕೊಡುತ್ತಾರೆ, ನಮ್ಮ ವಿಚಾರದಲ್ಲಿ ಅಕ್ಕಿಗೆ, ದಕ್ಷಿಣ ಹಿಂದೂಸ್ಥಾನದಲ್ಲಿ ಬೆಲೆ ಜಾಸ್ತಿ ಮಾಡಿದರೆ ರಾಷ್ಟ್ರದಲ್ಲಿ ಬೆಲೆಗಳ ಇನ್‌ಫ್ಲೇಷನ್ ಆಗಿ ಕೆಟ್ಟ ಪರಿಣಾಮವಾಗುವುದಿಲ್ಲ ಎಂದು ನಮ್ಮ ಸರ್ಕಾರದ ವಿಚಾರ ಇದೆ. ಏಕೆಂದರೆ ನಮ್ಮ ವಿಚಾರದ ಪ್ರಕಾರ ರೈತರಿಗೆ ಸ್ವಲ್ಪ ದರ ಜಾಸ್ತಿ ಕೊಟ್ಟರೆ ಅನುಕೂಲ ಎಂಬ ಭಾವನೆ ಇತ್ತು. ಅದರ ಪ್ರಕಾರ ನಮ್ಮ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಿದ್ದೇವೆ. ಕೇಂದ್ರದಿಂದ ಇನ್ನೂ ಸರಿಯಾದ ಜವಾಬು ಬಂದಿಲ್ಲ. ಕೇಂದ್ರದ ಮುಂದೆ ನಮ್ಮ ಅಭಿಪ್ರಾಯವನ್ನು ಮುಂದಿಸಿದ್ದೇವೆ, ಅವರಿಂದ ಸ್ಪಷ್ಟವಾದ ಉತ್ತರ ಬಂದಿಲ್ಲ, ಒಂದು ಲಕ್ಷ 25 ಸಾವಿರ ಪಲ್ಲ ನಮ್ಮ ಪ್ರೊಕ್ಯೂರ್‌ಮೆಂಟ್ ಟಾರ್ಗೆಟ್. ಅದಷ್ಟು ಮಟ್ಟಿಗೆ ಹೆಚ್ಚಿಗೆ ದೊರೆಯುವ ಧಾನ್ಯವನ್ನು ಅಂದರೆ ಬತ್ತವನ್ನು ಶೇಖರಿಸಿ ರೇಷನ್ ಜಾಸ್ತಿ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿದೆ. ಮಾರ್ಕೆಟ್‌ಬಲ್ ಸರ್ಪ್ಲಸ್ ಬತ್ತ ಸುಮಾರು 4 ಲಕ್ಷ ಟನ್ ಕರ್ನಾಟಕದಲ್ಲಿರಬಹುದು ನಮ್ಮ ಲೆಕ್ಕದ ಪ್ರಕಾರ. ಇದರಿಂದ 2 ಲಕ್ಷ 50 ಸಾವಿರ ಟನ್ ಅಕ್ಕಿಯಾಗಬಹುದು. ಇದನ್ನು ಸಂಗ್ರಹಿಸಬೇಕಾದರೆ ರೈತರ ಸಹಕಾರ ಬೇಕು, ಅದನ್ನು ಅವರು ಕೊಡಬೇಕಾದರೆ ಸ್ವಲ್ಪ ಮಟ್ಟಿಗೆ ಬೆಲೆ ಅವರಿಗೆ ಜಾಸ್ತಿ ಕೊಡಬೇಕಾಗುತ್ತದೆ. ಅವರಿಗೆ ಉತ್ಪತ್ತಿ ಮಾಡಲು ಆಗುವ ಖರ್ಚು ಕೊಡಬೇಕಾಗುವುದು. ಫರ್ಟಿಲೈಜರ್ಸ್ ಬೆಲೆ ಏನಿದೆ ಎಂಬುದನ್ನು ಸಹ ನಾವು ಗಣನೆಗೆ ತೆಗೆದುಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಸರಕಾರ ತನ್ನ ನೀತಿಯನ್ನು ಕೈಬಿಟ್ಟಿರುವುದೇಕೆ?

ಶ್ರೀ ಎಂ. ಪ್ಯೆ. ಘೋರ್ಪಡೆ.—ಕೈಬಿಡುವ ಪ್ರಶ್ನೆಯೇ ಇಲ್ಲ. ಶೇಖರಣೆ ಜಾಸ್ತಿ ಮಾಡಲು ನಾವು ಪ್ರಯತ್ನ ಮಾಡಿದ್ದೇವೆ. ಈಗ ಓಪನ್ ಮಾರ್ಕೆಟ್ಟಿನಲ್ಲಿರುವ ಕೊಳ್ಳಲು ಸಾಧ್ಯ ಎಂದಕನೋಡಿ ಶೇಖರಣೆ ಜಾಸ್ತಿ ಮಾಡಬೇಕೆಂಬ ಅಭಿಪ್ರಾಯವಿದೆ. ಸಹಕಾರ ಸಂಘಗಳ ಮೂಲಕ ಅಕ್ಕಿ ಶೇಖರಿಸಲು ಸಾಧ್ಯವಿದ್ದರೆ ಅದಕ್ಕೂ ಸಹ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ನಮ್ಮ ಉದ್ದೇಶ ಮತ್ತು ಕೇಂದ್ರ ಸರಕಾರದ ಉದ್ದೇಶ ಅದಷ್ಟು ಮಟ್ಟಿಗೆ ಸರ್ಪ್ಲಸ್ ತೆಗೆದುಕೊಂಡು ಕಾರ್ಡಿನ ಮೂಲಕ ಅವಶ್ಯಕತೆ ಇರುವ ಕಡೆ ಹಂಚಬೇಕೆಂಬುದು. ಆ ಉದ್ದೇಶ ಕೈಬಿಟ್ಟಿಲ್ಲ. ಬೆಲೆ ಸ್ವಲ್ಪಮಟ್ಟಿಗೆ ಜಾಸ್ತಿ ಮಾಡಿದರೆ ರೈತರ ಕಡೆಯಿಂದ ಸ್ವಲ್ಪ ಮಟ್ಟಿಗೆ ಸಹಕಾರ ಸಿಕ್ಕಲು ಸಾಧ್ಯ. ಅದು ಸಿಕ್ಕಿದರೆ ಕೇಂದ್ರ ಸರಕಾರವು ಮತ್ತು ರಾಜ್ಯ ಸರಕಾರದ ಉದ್ದೇಶ ಸಾಧಿಸಲು ಸಾಧ್ಯ. ಆ ಅಭಿಪ್ರಾಯದಿಂದ ಬೆಲೆ ಜಾಸ್ತಿ ಕೊಡಬೇಕಾದ ವಿಚಾರವನ್ನು ನಾವು ಕೇಂದ್ರ ಸರಕಾರದ ಮುಂದಿಟ್ಟಿದ್ದೇವೆ. ಅದರ ಬಗ್ಗೆ ಕೇಂದ್ರದವರು ಯೋಚನೆಮಾಡುತ್ತಿದ್ದಾರೆ. ಸೂಕ್ತವಾದ ಕಾಲಕ್ಕೆ ಅದು ಒಂದು ತೀರ್ಮಾನ ಮಾಡುವುದು. ಇದು ನ್ಯಾಷನಲ್ ಪಾಲಸಿ. ಅವರಿಗೂ ಸ್ವಲ್ಪ ತೊಂದರೆ ಇರುತ್ತದೆ. ತೊಂದರೆಯಿದ್ದ ಮಾತ್ರಕ್ಕೆ ನಮ್ಮ ವಿಚಾರವನ್ನು ಅವರ ಮುಂದಿಡಬಾರದು ಎಂದೇನೂ ಇಲ್ಲ. ಯೋಚನೆಮಾಡಿ ಕೇಂದ್ರ ಸರಕಾರ ಒಂದು ತೀರ್ಮಾನ ಮಾಡಬಹುದು.